ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ    ದಿನಾಂಕ : DATE : 10/03/2020


# ಮಾತೃ ಭಾಷೆಗಿರುವ ಶಕ್ತಿ ಬೇರೆ ಭಾಷೆಗಿಲ್ಲ

## ಕಾನೂನು ಕನ್ನಡ ಪುಸ್ತಕ ಲೋಕಾರ್ಪಣೆ



ಬೆಂಗಳೂರಿನಲ್ಲಿ ಸೋಮವಾರ ಕಾನೂನು ಕನ್ನಡ ಪುಸ್ತಕವನ್ನು ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಬಿಡುಗಡೆಗೊಳಿಸಿದರು. ಸಚಿವರಾದ ಜೆ.ಸಿ. ಮಾಧುಸ್ವಾಮಿ, ಸಿ.ಟಿ. ರವಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಟಿ.ಎಸ್. ನಾಗಾಭರಣ ಮತ್ತಿತರರು ಇದ್ದರು.

- ಭಾಷೆಯ ವ್ಯಾಮೋಹಕ್ಕೆ ಒಳಗಾಗದಿರಿ
- ಸಾಧನೆಗೆ ಸಮರ್ಪಣಾ ಭಾವ ಬೇಕು
- ಭಾಷೆ ಬಗ್ಗೆ ಇರಲಿ ಅಭಿಮಾನ

ಸಂ.ಕ. ಸಮಾಚಾರ ಬೆಂಗಳೂರು

ಯಾವುದೇ ಭಾಷೆ ಕಲಿಯಬಹುದು. ಆದರೆ, ಮಾತೃ ಭಾಷೆಗೆ ಇರುವ ಶಕ್ತಿ ಬೇರೆ ಯಾವ ಭಾಷೆಗೆ ಇಲ್ಲ. ಹಾಗಾಗಿ ಮಾತೃ ಭಾಷೆ ಉಳಿಸಬೇಕಾದ ಜವಾಬ್ದಾರಿ ಇದೆ ಎಂದು ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಕಾನೂನು ಇಲಾಖೆ, ರಾಜ್ಯ ಕಾನೂನು ವಿಶ್ವವಿದ್ಯಾಲಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಶ್ರಯದಲ್ಲಿ ಸೋಮವಾರ ಕಾನೂನು ಕನ್ನಡ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಭಾಷೆ ಎನ್ನುವುದು ಕೇವಲ ಅಕ್ಷರ ಶಬ್ದಗಳ ಜೋಡನೆಯಲ್ಲ. ಮಾತೃ ಭಾಷೆ ಬಗ್ಗೆ ಅಭಿಮಾನ, ನಂಬಿಕೆ, ಬದ್ಧತೆ ಇರಬೇಕು ಎಂದರು.

ನಮ್ಮನ್ನು ನಾವು ಸಮರ್ಪಿಸಿಕೊಂಡಾಗ ಮಾತ್ರ ಏನಾದರೂ ಸಾಧನೆ ಮಾಡಲು ಸಾಧ್ಯ. ಸಮರ್ಪಣಾ ಭಾವ ಸಹಜವಾಗಿ ಬರುವುದಿಲ್ಲ. ಅದಕ್ಕಾಗಿ ಕಠಿಣ ಪರಿಶ್ರಮ ಬಹಳ ಮುಖ್ಯವಾಗಿದೆ. ಕಾನೂನು ಜ್ಞಾನ ಎಲ್ಲರಿಗೂ ಬೇಕು. ಕನ್ನಡದಲ್ಲಿ ಕಾನೂನು ಪುಸ್ತಕ ಹೊರತಂದಿರುವುದು ಒಳ್ಳೆಯ ಬೆಳವಣಿಗೆ ಎಂದ ಅವರು, ಇತಿಹಾಸದಲ್ಲಿಯೇ ಸಂವಿಧಾನದ ಬಗ್ಗೆ ಸದನದಲ್ಲಿ ಉತ್ತಮ ಚರ್ಚೆ ನಡೆಯುತ್ತಿದೆ ಎಂದು ತಿಳಿಸಿದರು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಮಾತನಾಡಿ, ಪರ ಭಾಷೆ ವ್ಯಾಮೋಹದಿಂದ ತಮ್ಮ ಮಕ್ಕಳನ್ನು ಇಂಗ್ಲಿಷ್ ಮಧ್ಯಮಕ್ಕೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಆದರೆ, ಮಾತೃ ಭಾಷೆಯ ಕಡೆಗೆ ಗಮನ ನೀಡುತ್ತಿಲ್ಲ. ಭಾಷೆಯ ವ್ಯಾಮೋಹಕ್ಕೆ ಒಳಗಾಗದೇ ಮಕ್ಕಳನ್ನು ಜ್ಞಾನವಂತರನ್ನಾಗಿ ಮಾಡಬೇಕು. ಅದು ಮಾತೃ ಭಾಷೆಯಿಂದಲೇ ಮಾತ್ರ ಸಾಧ್ಯ ಎಂದರು.

ಭಾಷೆಯಲ್ಲಿ ಯಾವುದೇ ರೀತಿ ಕೊರತೆ ಇಲ್ಲ. ಆದರೆ, ಜ್ಞಾನ ಪ್ರಮುಖವಾಗಿದೆ. ಕನ್ನಡಕ್ಕಾಗಿ ನಾವೇನು ಮಾಡಿದೇವು ಎನ್ನುವ ಭಾವನೆ ಬರಬೇಕು. ಮಾತೃ ಭಾಷೆ ಚೆನ್ನಾಗಿ ಇಲ್ಲದೇ ಹೋದರೆ ಉಳಿದ ಭಾಷೆಯಲ್ಲಿ ಹೆಚ್ಚಿನ ಪರಿಣಿತಿ ಪಡೆದರೂ ಕೊರತೆ ಎದ್ದು ಕಾಣುತ್ತದೆ. ಮಾತೃ ಭಾಷೆಯಿಂದಲೇ ಯಶಸ್ವಿ ಕಾಣಲು ಸಾಧ್ಯವಾಗಲಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸಿ.ಟಿ. ರವಿ ಮಾತನಾಡಿ, ಭಾಷೆ ಜೊತೆ ಸಂಸ್ಕೃತಿ ಇದೆ. ಭಾಷೆ ಕಳೆದು ಹೋದರೆ ಸಂಸ್ಕೃತಿಯು ಕಳೆದು ಹೋಗಲಿದೆ. ಅದಕ್ಕಾಗಿ ಭಾಷೆ ಬಗ್ಗೆ ದುರಾಭಿಮಾನ ಇರಬೇಕು ಅಂತಲ್ಲ. ಅಭಿಮಾನ ಇರಬೇಕು. ನಮ್ಮ ಮನೆಯಿಂದಲೇ ಭಾಷೆ ಉಳಿವು ಪ್ರಾರಂಭ ಆಗಬೇಕು. ಭಾಷಾ ಶುದ್ಧೀಕರಣ ನಡೆಯಬೇಕಾಗಿದೆ. ಭಾಷೆ ಬಗ್ಗೆ ಅಭಿಮಾನ ಮೂಡಿಸುವ ಕೆಲಸ ಆಗಬೇಕು ಎಂದು ಅಭಿಪ್ರಾಯಪಟ್ಟರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಟಿ.ಎಸ್. ನಾಗಾಭರಣ ಅಧ್ಯಕ್ಷತೆ ವಹಿಸಿದ್ದರು. ಕಾನೂನು ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಬಿ. ವಸ್ತ್ರಮಠ ಮತ್ತಿತರರಿದ್ದರು.